**ಅಸಲು ದಾವ ಸಂಖ್ಯೆಃ 1141/2015**
**ಪಿ .ಡಬ್ಲೂ -1**

ದಿಃ 10.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಪಾಟೀ ಸವಾಲು 1 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಸ್ ಆರ್ ಹೆಚ್ ರವರಿಂದಃ-**

1. ಈ ದಾವೆಯನ್ನು ನನ್ನ ಜಮಿನೀನ ಸಂಬಂಧ ಹೂಡಿರುತ್ತೇನೆ. ನಾನು ಈ ದಾವೆಯನ್ನು 24 ಗುಂಟೆಯ ಜಮೀನಿನ ಸಂಬಂಧ ಹೂಡಿದ್ದು, ಅದರ ಸರ್ವೇ ನಂಬರ ನನಗೆ ನೆನಪಿಲ್ಲ. ಈ ದಾವೆಯನ್ನು ಸರ್ವೇ ನಂಬರ 124 ರ ಜಮೀನಿನ ಸಂಬಂಧ ಹೂಡಿರುತ್ತೇನೆ. ಸರ್ವೇ ನಂಬರ 124 ಒಟ್ಟು 2 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನು ಆಗಿರುತ್ತದೆ. ಸರ್ವೇ ನಂಬರ 124 ರ ಪೂರ್ವಕ್ಕೆ ಸ್ವಾಮಿ ರವರ ಮನೆ ಅವರ ಪೂರ್ಣ ಹೆಸರು ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಸ್ವಾಮಿ ರವರ ಮನೆ ಉತ್ತರಕ್ಕೆ ನಾನ ಪಾಟೀಲ ರವರ ಜಮೀನು ದಕ್ಷಿಣಕ್ಕೆ ಅಪ್ಪಾಜಿ ಪಾಟೀಲ ರವರ ಜಮೀನು.

2. ಸರ್ವೇ ನಂಬರ 144 ರ ಜಮೀನು ಮೂಲತಃ ಸಾತಪ್ಪ ಲಕ್ಷ್ಮಣ ಪಾಟೀಲ ರವರಿಗೆ ಸೇರಿದ್ದಾಗಿರುತ್ತದೆ. ಸಾತಪ್ಪ ಲಕ್ಷ್ಮಣ ಪಾಟೀಲ ರವರು ನಮ್ಮ ಬಾಹುಬಂಧುಗಳು. ಸರ್ವೇ ನಂಬರ 144 ರ ಜಮೀನನ್ನು ನನ್ನ ದೊಡ್ಡಪ್ಪ ಅಪ್ಪಾಸಾಹೇಬ ಅಪ್ಪಣ್ಣಾ ಪಾಟೀಲ ಮತ್ತು ನನ್ನ ನನ್ನ ಬಾಹುಬಂಧುವಾದ ದತ್ತು ಮಾರುತಿ ಪಾಟೀಲ ರವರು ಖರೀದಿ ಮಾಡಿರುತ್ತಾರೆ. ಅವರು ಯಾವಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಜಮೀನು ರೂ 80/- ರೂಗಳಿಗೆ ಖರೀದಿಯಾಗಿರುತ್ತದೆ. ಸದರಿ ಖರೀದಿ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಖರೀದಿ ಪತ್ರದ ಪ್ರಕಾರ 24 ಗುಂಟೆ ಜಾಗವನ್ನು ಖರೀದಿ ಮಾಡಲಾಗಿರುತ್ತದೆ. ಖರೀದಿ ಪತ್ರದ ಪ್ರಕಾರ ದತ್ತು ಮಾರುತಿ ಪಾಟೀಲ ಹಾಗೂ ಅಪ್ಪಸಾಹೇಬ ಅಪ್ಪಣ್ಣ ಪಾಟೀಲ ರವರ

ಹೆಸರು ಉತಾರದಲ್ಲಿ ನಮೂದು ಇರುತ್ತದೆ. ಸದರಿ ಖರೀದಿ ವ್ಯವಹಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

3. ನಾನು ಅವಿದ್ಯಾವಂತ. ಈ ದಾವೆಯನ್ನು ಹೂಡಲು ವಕೀಲರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ತನ್ನ ತಂದೆಯು ಇಟ್ಟಿದ್ದ ಕಾಗದ ಪತ್ರಗಳ ಆಧಾರದ ಮೇಲೆ ತಾನು ವಕೀಲರಿಗೆ ಮಾಹಿತಿ ನೀಡಿರುವುದಾಗಿ ನುಡಿಯುತ್ತಾರೆ. ನನ್ನ ತಂದೆ ಸುಮಾರು 40 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟಾಗ ನನಗೆ ಸುಮಾರು 20 ವರ್ಷ ಆಗಿತ್ತು. ನನ್ನ ದೊಡ್ಡಪ್ಪ ಅಪ್ಪಣ್ಣ ನನ್ನ ತಂದೆಯವರ ಮರಣಕ್ಕೂ ಮುನ್ನವೇ ಮೃತಪಟ್ಟಿರುತ್ತಾರೆ. ನನ್ನ ದೊಡ್ಡಪ್ಪ ಮೃತಪಟ್ಟಾಗ ನಾನು ಮೈನರ್ ಆಗಿದ್ದೇನು. ನನಗೆ ಏನು ತಿಳಿಯುತ್ತಿರಲಿಲ್ಲ.

4. ಬಾಹು ಪಾಟೀಲ ಯಾರು ಎಂದರೆ ಆತ ಮಾರುತಿ ಪಾಟೀಲನ ಮಗ ಎಂದು ನುಡಿಯುತ್ತಾರೆ. ಮಾರುತಿ ಪಾಟೀಲ ಹಾಗೂ ನನಗೂ ಯಾವುದೇ ಸಂಬಂಧ ಇಲ್ಲ. ನನ್ನ ತಂದೆಯವರಿಗೆ ಇಬ್ಬರೂ ಗಂಡು ಮಕ್ಕಳು ಹಾಗೂ ಇಬ್ಬರೂ ಹೆಣ್ಣು ಮಕ್ಕಳು. ನನ್ನ ಸಹೋದರಿಯರ ಹೆಸರು ಯಮ್ಮು, ಅಕ್ಕತಾಯಿ. ಅವರ ಪೈಕಿ ಯಮ್ಮು ಮೃತಪಟ್ಟಿರುತ್ತಾರೆ. ಯಮ್ಮು ರವರ ಪತಿ ಮೃತಪಟ್ಟಿದ್ದು ಅವರ ಮಗ ಮುಂಬೈಯಲ್ಲಿರುತ್ತಾರೆ. ಯಮ್ಮು ರವರ ಮಗನನ್ನು ಹಾಗೂ ಅಕ್ಕಾತಾಯಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಮ್ಮ ರಮೇಶ ಮತ್ತು ಆತನ ಪತ್ನಿ ಮೃತಪಟ್ಟಿದ್ದು, ಆತನಿಗೆ ಒಬ್ಬ ಮಗಳು ಇರುತ್ತಾಳೆ. ಆಕೆಯ ಹೆಸರು ವಿಜಯಮಾಲಾ@ ಶೀತಲ. ವಿಜಯಮಾಲಾ ಮತ್ತು ಶೀತಲ ಒಬ್ಬ ವ್ಯಕ್ತಿಯ ಹೆಸರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

5. ಮಾರುತಿ ರಾಮಚಂದ್ರ ಪಾಟೀಲ ಯಾರು ಎಂದು ನನಗೆ ಮಾಹಿತಿ ಇಲ್ಲ. ಮಾರುತಿ, ವಿಜಯ ಹಾಗೂ ರಂಜಿತ ರವರನ್ನು ಹೊರತುಪಡಿಸಿ ಬೇರೆ ಯಾರ ವಿರುದ್ದವೂ ನಾನು ದಾವೆ ಹೂಡಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**